ಎಲ್ಲ ತಾತ್ತ್ವಿಕ ಭಾವನೆಗಳ ಸಾಮರಸ್ಯವನ್ನು ಕಾಣುತ್ತೇವೆ. ಎಲ್ಲ ಉಪನಿಷತ್ತುಗಳೂ ಉಪಾಸನೆಯ ದ್ವೈತಭಾವದಿಂದ ಪ್ರಾರಂಭವಾಗಿ ಪರಮ ಅದ್ವೈತದ ಭಾವದಲ್ಲಿ ಕೊನೆಗಾಣುತ್ತವೆ. ಉಪನಿಷತ್ತಿನ ಭವ್ಯ ಭಾವನೆಯನ್ನು ವಿವರಿಸಲು ಸ್ವಾಮೀಜಿ ಮುಂಡಕೋಪನಿಷತ್ತಿನ ಒಂದು ಮಂತ್ರವನ್ನು ಉದಹರಿಸುತ್ತಾರೆ. ಅದರ ಅರ್ಥ ಹೀಗಿದೆ: "ಒಂದೇ ಮರದಲ್ಲಿ ಸುಂದರವಾದ ಗರಿಗಳಿರುವ ಎರಡು ಹಕ್ಕಿಗಳಿವೆ. ಎರಡೂ ಅನ್ಯೋನ್ಯ ಪ್ರೀತಿಯಿಂದ ಇವೆ. ಒಂದು ಹಣ್ಣನ್ನು ತಿನ್ನುತ್ತಿದೆ. ಇನ್ನೊಂದು ಏನನ್ನೂ ತಿನ್ನದೆ ಶಾಂತವಾಗಿ ಕುಳಿತಿದೆ. ಕೆಳಗಿನ ರೆಂಬೆಯಲ್ಲಿ ಕುಳಿತಿರುವ ಹಕ್ಕಿ ಒಂದು ಸಲ ಕಹಿ, ಮತ್ತೊಂದು ಸಲ ಸಿಹಿ ಹಣ್ಣನ್ನು ತಿಂದು ಸುಖದುಃಖಗಳನ್ನು ಅನುಭವಿಸುತ್ತಿದೆ. ಮೇಲಿರುವ ಹಕ್ಕಿ ಶಾಂತವಾಗಿ ಗಂಭೀರವಾಗಿದೆ. ಅದು ಸಿಹಿ ಹಣ್ಣನ್ನಾಗಲಿ, ಕಹಿ ಹಣ್ಣನ್ನಾಗಲಿ ತಿನ್ನುತ್ತಿಲ್ಲ; ಸುಖದುಃಖಗಳನ್ನೂ ಲೆಕ್ಕಿಸುವುದಿಲ್ಲ; ತನ್ನ ಸ್ವಯಂಪ್ರಭೆಯಲ್ಲಿ ತಲ್ಲೀನವಾಗಿರುವುದು."

ಸ್ವಾಮೀಜಿ ಈ ಮಂತ್ರಕ್ಕೆ ಸುಂದರವಾದ ವಿವರಣೆಯನ್ನು ನೀಡುತ್ತಾರೆ: ಇದೇ ಮಾನವಜೀವಿಯ ಚಿತ್ರ. ಕೆಳಗಿನ ಹಕ್ಕಿ ಮೇಲಿನದನ್ನು ಸಮೀಪಿಸಿದಂತೆಲ್ಲಾ ಬದಲಾಗುತ್ತ ಬರುವುದು. ಅದು ಹತ್ತಿರ ಹತ್ತಿರ ಬಂದಂತೆಲ್ಲಾ ಒಂದೇ ಹಕ್ಕಿ ಉಳಿಯವುದು. ಕೆಳಗಿನ ಹಕ್ಕಿ ದ್ವೈತ ಪ್ರಪಂಚದ ಸಂಸಾರದಲ್ಲಿ ನರಳುತ್ತಿರುವ ಜೀವಿಯನ್ನು ಸಂಕೇತಿಸುತ್ತದೆ. ಮೇಲಿನ ಹಕ್ಕಿ ಪರಮಾದ್ವೈತದ ಸಂಕೇತವಾಗಿದೆ. ಪಾರಮಾರ್ಥಿಕವಾಗಿ ನೋಡಿದರೆ, ಎರಡು ಹಕ್ಕಿಗಳು ಇರಲೇ ಇರಲಿಲ್ಲ. ಕೆಳಗಿನ ಹಕ್ಕಿ ಮೇಲಿನ ಹಕ್ಕಿಯ ಪ್ರತಿಬಿಂಬ ಮಾತ್ರ. ಈ ಉದಾಹರಣೆಯಲ್ಲಿ ಉಪನಿಷತ್ತು, ನಮ್ಮನ್ನು ದ್ವೈತಸಿದ್ಧಾಂತದಿಂದ ಪರಮಾದ್ವೈತಕ್ಕೆ ಒಯ್ಯುತ್ತದೆ ಎನ್ನುತ್ತಾರೆ ಸ್ವಾಮೀಜಿ.

**ಶಕ್ತಿಸಂದೇಶ:** ಸ್ವಾಮೀಜಿಯವರ ಪ್ರಕಾರ, ಪ್ರತಿಯೊಂದು ಮಂತ್ರದಲ್ಲಿಯೂ ಉಪನಿಷತ್ತು ಸಾರುವ ಸಂದೇಶವೇ, 'ಶಕ್ತಿ', 'ಶಕ್ತಿ' ಎನ್ನುವುದು. ಅದು ಸಾರುವ ಮಹಾನೀತಿಯೇ ಇದು: "ಹೇ ಮಾನವ, ಶಕ್ತನಾಗು, ದುರ್ಬಲನಾಗಬೇಡ" ಎಂದು. "ಪ್ರತಿ ಸಲವೂ ನಮಗೆ ಬೇಕಾದುದೇ ಶಕ್ತಿ. ಉಪನಿಷತ್ತುಗಳು ಶಕ್ತಿಯ ಮಹಾಗಣಿ. ಜಗತ್ತನ್ನೆಲ್ಲ ಜಾಗೃತಗೊಳಿಸುವಷ್ಟು ಶಕ್ತಿ ಅಲ್ಲಿದೆ. ಜಗತ್ತಿಗೆ ಅದರ ಮೂಲಕ ಜ್ಞಾನದಾನ ಮಾಡಬಹುದು; ಶಕ್ತಿಯನ್ನೂ, ಸ್ಫೂರ್ತಿಯನ್ನೂ ನೀಡಬಹುದು. ಜಗತ್ತಿನ ಎಲ್ಲ ದೇಶಗಳ, ಎಲ್ಲ ಕೋಮುಗಳ ದುರ್ಬಲರಿಗೆ, ದುಃಖಿಗಳಿಗೆ, ದಬ್ಬಾಳಿಕೆಗೆ ಒಳಗಾದವರಿಗೆ, "ನಿಮ್ಮ ಕಾಲಿನ ಮೇಲೆ ನಿಂತು ಮುಕ್ತರಾಗಿ" ಎನ್ನುತ್ತದೆ ಉಪನಿಷತ್ತು.

ದೈಹಿಕ ಸ್ವಾತಂತ್ರ್ಯ, ಮಾನಸಿಕ ಸ್ವಾತಂತ್ರ್ಯ, ಆಧ್ಯಾತ್ಮಿಕ ಸ್ವಾತಂತ್ರ್ಯವೇ ಉಪನಿಷತ್ತಿನ ಮೂಲಮಂತ್ರ. ಸ್ವಾಮೀಜಿಯವರ ಪ್ರಕಾರ ಉಪನಿಷತ್ತುಗಳು ಬರೀ ಮೋಕ್ಷದ ಬಗ್ಗೆ ಹೇಳದೆ, ಸ್ವಾತಂತ್ರ್ಯದ ಬಗ್ಗೆ ಹೇಳುತ್ತವೆ. ಇಡೀ ಜಗತ್ತಿನಲ್ಲಿ ಈ ರೀತಿ ಸ್ವಾತಂತ್ರ್ಯವನ್ನು ಪ್ರತಿಪಾದಿಸುವ ಶಾಸ್ತ್ರ ಇದೊಂದೇ. "ಪ್ರಕೃತಿಬಂಧನದಿಂದ ಪಾರಾಗಿ, ದೌರ್ಬಲ್ಯದಿಂದ ಪಾರಾಗಿ; ಆ ಸ್ವಾತಂತ್ರ್ಯ ಆಗಲೇ ನಿಮ್ಮಲ್ಲಿದೆ" ಎಂದು ಉಪನಿಷತ್ತು ಸಾರುತ್ತದೆ. ಉಪನಿಷತ್ತಿನ ಒಂದು ಪ್ರಮುಖ ವೈಶಿಷ್ಟ್ಯವೇ ಇದು.

**ವಿಶ್ವದ ಅಖಂಡತೆ:** ಉಪನಿಷತ್ತುಗಳು ಜಗತ್ತಿಗೆ ನೀಡುವ ಎರಡನೆಯ ಮಹಾಭಾವನೆಯೆಂದರೆ ವಿಶ್ವದ ಅಖಂಡತ್ವ. ಒಬ್ಬರು ಮತ್ತೊಬ್ಬರನ್ನು ದ್ವೇಷಿಸುವಂತೆ ಮಾಡುವುದು ಅಜ್ಞಾನ. ಪರಸ್ಪರ ಪರಿಚಯವಾದ ಮೇಲೆ ಪ್ರೀತಿ ಉದಯಿಸುವುದು. ಅದು ಬರಲೇಬೇಕು ಎನ್ನುತ್ತಾರೆ, ಸ್ವಾಮೀಜಿ. ಏಕೆಂದರೆ ನಾವೆಲ್ಲ ಒಂದೇ ಅಲ್ಲವೇ? ಹೀಗೆ ಅಖಂಡತೆಯು ತಾನಾಗಿಯೇ ತೋರಿ ಬರುವುದನ್ನು ನಾವು ನೋಡುತ್ತೇವೆ. ಜಗತ್ತನ್ನು ಭೌತಿಕ ದೃಷ್ಟಿಯಿಂದ ನೋಡಿದಾಗ, ಅದು ಜಡವಸ್ತುವಿನ ಒಂದು ಮಹಾಸಾಗರ; ಮಾನಸಿಕ ದೃಷ್ಟಿಯಿಂದ ನೋಡಿದಾಗ ಇದೊಂದು ಆಲೋಚನೆಯ ಸಾಗರ; ಆಧ್ಯಾತ್ಮಿಕ ದೃಷ್ಟಿಯಿಂದ ನೋಡಿದಾಗ ಇದು ಅಚಲವಾದುದು, ಬದಲಾಗದ್ದು, ಏಕವಾಗಿರುವಂಥದು. ಈ ಬಗೆಯ ಅಖಂಡ ತತ್ತ್ವ ಉಪನಿಷತ್ತುಗಳಲ್ಲಿ ದೊರಕುವುದು. ಅದಲ್ಲದೆ, ನೀತಿಶಾಸ್ತ್ರಕ್ಕೆ ಆಧಾರಭೂತವಾದ ತತ್ತ್ವ ಇಂದು ಜಗತ್ತಿಗೆ ಬೇಕಾಗಿದೆ. ಇದು ಕೂಡ ನಮಗೆ ಆತ್ಮಸಿದ್ಧಾಂತದ ರೂಪದಲ್ಲಿ ಉಪನಿಷತ್ತುಗಳಿಂದಲೇ ದೊರಕುವುದು.

**ದೌರ್ಬಲ್ಯದ ಜಿಜ್ಞಾಸೆ:** ಹೊರಗಿನವರಿಗಿಂತ ಹೆಚ್ಚಾಗಿ, ಉಪನಿಷತ್ತಿನ ಈ ಅಮೂಲ್ಯ ಭಾವನೆಗಳು ಭಾರತೀಯರಾದ ನಮಗೆ ಅಗತ್ಯ ಎನ್ನುತ್ತಾರೆ ಸ್ವಾಮೀಜಿ. ಅವರ ಪ್ರಕಾರ ಭಾರತೀಯರಾದ ನಾವು ದುರ್ಬಲರು, ಶುದ್ಧ ಸೋಮಾರಿಗಳು, ಕೆಲಸ ಮಾಡುವುದಿಲ್ಲ, ಒಗ್ಗಟ್ಟಿಲ್ಲ, ಅನ್ಯರನ್ನು ಪ್ರೀತಿಸುವುದಿಲ್ಲ, ನಾವು ಬರಿಯ ಸ್ವಾರ್ಥಿಗಳು; ಪರಸ್ಪರ ದ್ವೇಷಿಸದೆ, ಅಸೂಯೆಪಡದೆ ಮೂರು ಜನರು ಕೂಡ ಒಟ್ಟಿಗೆ ಕಲೆಯಲಾರೆವು; ಗಿಳಿಯಂತೆ ಬರೀ ಮಾತನಾಡುತ್ತೇವೆ; ಏನನ್ನೂ ಅನುಷ್ಠಾನಕ್ಕೆ ತರುವುದಿಲ್ಲ. ಇದೇ ನಮ್ಮ ಸ್ಥಿತಿ. ಇದಕ್ಕೆ ಪರಿಹಾರವೇನು? ಮೊದಲು **ಶಾರೀರಿಕವಾಗಿ ಬಲಿಷ್ಠರಾಗಿ** ಎಂದು ಸ್ವಾಮೀಜಿ ಜನರಿಗೆ, ಅದರಲ್ಲೂ ಯುವಕರಿಗೆ, ಕರೆಕೊಡುತ್ತಾರೆ. ಎರಡನೆಯದಾಗಿ **ನಮ್ಮಲ್ಲಿನ ಶ್ರೇಷ್ಠತೆಯನ್ನು ಪರಿಭಾವಿಸುವುದು.** ಅದನ್ನೇ ಉಪನಿಷತ್ತುಗಳಲ್ಲಿ ಶ್ರದ್ಧೆ ಎನ್ನುವರು. ಸ್ವಾಮೀಜಿ ಹೀಗೆ ಹೇಳುತ್ತಾರೆ: " ನೀವು ಶ್ರೇಷ್ಠರೆಂದು ಭಾವಿಸಿ, ಶ್ರೇಷ್ಠರಾಗುವಿರಿ... ಶಕ್ತಿ, ಶಕ್ತಿಯೇ ನಿಮಗೆ ಬೇಕಾಗಿರುವುದು. ಅದನ್ನೇ ನಾನು ಒತ್ತಿ ಹೇಳುತ್ತೇನೆ. ಶಕ್ತಿಯನ್ನು ಪಡೆಯಬೇಕಾದರೆ ಮೊದಲ ಹೆಜ್ಜೆಯೇ 'ನಾನು ಆತ್ಮ' ಎಂದು ನಂಬುವುದು... ನಮ್ಮೆಲ್ಲರಲ್ಲೂ ಪರಂಜ್ಯೋತಿಯಾದ ಆತ್ಮನಿರುವನು. ಇದನ್ನು ನಂಬೋಣ... ವೀರರಂತೆ, ಧೀರರಂತೆ ನಿಂತು, ಪ್ರಚಂಡ ಬುದ್ಧಿಶಕ್ತಿಯಿಂದ ದೇವರಂತೆ ನೀವು ಜಗತ್ತನ್ನೇ ಚಲಿಸುವಂಥವರಾಗಿ ಎಂದು ನಾನು ಆಶಿಸುತ್ತೇನೆ. ಉಪನಿಷತ್ತುಗಳಿಂದ ದೊರಕುವ ಶಕ್ತಿ ಇದು, ಶ್ರದ್ಧೆ ಇದು."

**ಕಾರ್ಯಪ್ರಣಾಳಿ:** ಉಪನಿಷತ್ತಿನ ಭಾವನೆಗಳ ಮೇಲೆ ಆಧರಿಸಿದ ಕಾರ್ಯಪ್ರಣಾಳಿಯನ್ನು ಸ್ವಾಮೀಜಿ ನಮಗೆ ಬೋಧಿಸುತ್ತಾರೆ. ಉಪನಿಷತ್ತುಗಳ ಭಾವನೆಗಳು ಹೊರಗೆ ಬರಬೇಕು, ಅವು

ಕೇವಲ ಅರಣ್ಯದಲ್ಲಿ ಮತ್ತು ಗಿರಿ ಗುಹೆಗಳಲ್ಲಿ ಮಾತ್ರ ಇದ್ದು ಬಿಡಬಾರದು. ನ್ಯಾಯಾಸ್ಥಾನದಲ್ಲಿ, ಪ್ರಾರ್ಥನಾಲಯದಲ್ಲಿ, ಬಡವನ ಕುಟೀರದಲ್ಲಿ ಅದು ರೂಢಿಗೆ ಬರಬೇಕು ಎಂದು ಸ್ವಾಮೀಜಿ ಹೇಳುತ್ತಾರೆ. ಮೀನನ್ನು ಹಿಡಿಯುವ ಬೆಸ್ತರಿಗೂ, ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೂ ವೇದಾಂತ ಸಹಾಯಕ್ಕೆ ಬರಬೇಕು. ಸ್ತ್ರೀ ಪುರುಷ ಬಾಲಕರಿಗೂ, ಅವರು ಎಲ್ಲಿಯೇ ಇರಲಿ, ಯಾವ ಕೆಲಸವನ್ನಾದರೂ ಮಾಡುತ್ತಿರಲಿ, ಎಲ್ಲರಿಗೂ ಇದು ಅನ್ವಯವಾಗಬೇಕು.

ಅದು ಹೇಗೆ? ಸ್ವಾಮೀಜಿ ಉತ್ತರಿಸುತ್ತಾರೆ: "ಬೆಸ್ತ ತಾನು ಆತ್ಮನೆಂದು ತಿಳಿದರೆ ಅವನು ಒಳ್ಳೆಯ ಬೆಸ್ತನಾಗುವನು. ವಿದ್ಯಾರ್ಥಿ ತಾನು ಆತ್ಮನೆಂದು ತಿಳಿದರೆ ಒಳ್ಳೆಯ ವಿದ್ಯಾರ್ಥಿಯಾಗುವನು. ವಕೀಲ ತಾನು ಆತ್ಮನೆಂದು ತಿಳಿದರೆ, ಆತ ಒಳ್ಳೆಯ ವಕೀಲ ನಾಗುವನು." ಈ ದಿವ್ಯ ಸಂದೇಶವನ್ನು ಎಲ್ಲರಿಗೂ ಪ್ರಚಾರ ಮಾಡುವಂಥ ಕಾರ್ಯಕರ್ತರಾಗಿರಿ ಎಂದು ಸ್ವಾಮೀಜಿ ನಮಗೆಲ್ಲ ಕರೆಕೊಡುತ್ತಾರೆ. ಅದಕ್ಕಾಗಿ ಪ್ರತಿಯೊಬ್ಬ ಸ್ತ್ರೀಪುರುಷರನ್ನೂ ದೇವರಂತೆ ನೋಡಿ, ಅವರ ಸೇವೆ ಮಾಡಿ ಎಂದು ಅವರು ಹೇಳುತ್ತಾರೆ. ದೀನರು, ದುಃಖಿಗಳು ನಮ್ಮ ಮೋಕ್ಷಕ್ಕಾಗಿಯೇ ಇರುವರು. ರೋಗಿಯಂತೆ, ಹುಚ್ಚನಂತೆ, ಕುಷ್ಠರೋಗಿಯಂತೆ, ಪಾಪಿಯಂತೆ ದೇವರು ನಿಮ್ಮ ಮುಂದೆ ಬರುತ್ತಾನೆ. ಹೀಗಾಗಿ ಸೇವೆಯನ್ನು ಒಂದು ಪೂಜೆಯಂತೆ ಮಾಡಿ ಎಂದು ಸ್ವಾಮೀಜಿ ಬೋಧಿಸುವರು. ಅದರ ಜೊತೆಜೊತೆಗೆ ಪ್ರಪಂಚದಲ್ಲಿ ಜ್ಞಾನ ವನ್ನು ಪ್ರಸಾರ ಮಾಡಿ ಎಂದೂ ಅವರು ಕೇಳಿಕೊಳ್ಳುತ್ತಾರೆ. ಪ್ರತಿಯೊಬ್ಬರಿಗೂ ಜ್ಞಾನ ಬರಲಿ, ಪ್ರತಿಯೊಬ್ಬರೂ ಭಗವಂತನ ಸಾಕ್ಷಾತ್ಕಾರವನ್ನು ಪಡೆಯುವವರೆಗೆ ನಮ್ಮ ಕರ್ತವ್ಯ ಮುಗಿಯು ವುದಿಲ್ಲ ಎಂದು ಅವರು ಹೇಳುತ್ತಾರೆ. ಈ ಎಲ್ಲ ಕಾರ್ಯಗಳನ್ನು ಅನುಷ್ಠಾನಕ್ಕೆ ತರಲು ಭಗವಂತನು ನಮಗೆ ಶಕ್ತಿ, ಸಹಾಯಗಳನ್ನು ನೀಡಲಿ ಎಂದೂ ಹಾರೈಸುತ್ತಾರೆ.

ಇಲ್ಲಿಯವರೆಗೆ ಸ್ವಾಮೀಜಿ ಚೆನ್ನೈ ನಗರದಲ್ಲಿ ಮಾಡಿದ ಮೂರು ಭಾಷಣಗಳ ಸಂಕ್ಷಿಪ್ತ ಪರಿಚಯವನ್ನು ಮಾಡಿಕೊಂಡೆವು. ಇನ್ನು ಉಳಿದ ಮೂರು ಭಾಷಣಗಳ ಸಾರಾಂಶವನ್ನು ವಿವೇಕಪ್ರಭದ ಫೆಬ್ರವರಿ ೨೦೧೩ರ ಸಂಚಿಕೆಯಲ್ಲಿ ತಿಳಿದುಕೊಳ್ಳೋಣ.

## ಯಾರೂ ಸಣ್ಣವರಲ್ಲ

ಒಮ್ಮೆ ಉದ್ದನೆಯ ಸೀಸದಕಡ್ಡಿಯು ಚಿಕ್ಕದಾದ ಸೀಸದಕಡ್ಡಿಯನ್ನು ನೋಡಿ, "ನಾನು ಎಷ್ಟು ಎತ್ತರವಾಗಿದ್ದೇನೆ ನೋಡು" ಎಂದು ಜಂಬದಿಂದ ಹೇಳಿತು. ಅದಕ್ಕೆ ಉತ್ತರವಾಗಿ, ಚಿಕ್ಕ ಸೀಸದ ಕಡ್ಡಿಯು "ಎಲೈ ಸ್ನೇಹಿತನೇ, ಮೊದಲು ನಾನೂ ನಿನ್ನ ಹಾಗೆ ಎತ್ತರವಾಗಿಯೇ ಇದ್ದೆ. ಬರವಣಿಗೆ ಯಲ್ಲಿ ನನ್ನನ್ನು ಸಮರ್ಪಿಸಿಕೊಂಡು ಈ ರೀತಿ ಗಿಡ್ಡನಾದೆ. ಆದರೆ ಏನಂತೆ, ನನಗೆ ಅತ್ಯಂತ ಹೆಚ್ಚಿನ ಅನುಭವವಿದೆ" ಎಂದು ಆತ್ಮವಿಶ್ವಾಸದಿಂದ ಉತ್ತರಿಸಿತು.

ಶ್ರೇಷ್ಠ ವ್ಯಕ್ತಿಗಳಾದ ಲಾಲ ಬಹದ್ದೂರ್ ಶಾಸ್ತ್ರಿ ಮತ್ತು ನೆಪೋಲಿಯನ್ ಆಕಾರದಲ್ಲಿ ಗಿಡ್ಡರಾಗಿದ್ದರು! ಆದರೆ ಅವರ ಸಾಧನೆ ಮಾತ್ರ ಹಿಮಾಲಯದ ಶಿಖರದಂತಿತ್ತು. ನಮ್ಮ ಪುರಾಣಗಳಲ್ಲಿಯೂ ಕೆಲವು ಪ್ರಸಂಗಗಳು ಇದರ ಬಗ್ಗೆ ಬೆಳಕು ಚೆಲ್ಲುತ್ತವೆ. ಭಗವಾನ್ ವಿಷ್ಣುವು ದಶಾವತಾರಗಳಲ್ಲಿ ಒಂದಾದ ವಾಮನ ಅವತಾರವನ್ನು ತಾಳಿ ಜಗತ್ತನ್ನು ತನ್ನ ಪದತಲಕ್ಕೇ ತಂದುಕೊಂಡು, ತ್ರಿವಿಕ್ರಮ ಎನಿಸಿಕೊಳ್ಳಲಿಲ್ಲವೇ?

ಒಮ್ಮೆ ಭಕ್ತನೊಬ್ಬ ದೇವರಲ್ಲಿ ಕೈಮುಗಿದು ಪ್ರಾರ್ಥಿಸುತ್ತಿರುವಾಗ ಆತನ ಕಿರುಬೆರಳು ಚಿಂತೆ ಮಾಡುತ್ತಿರುವುದನ್ನು ಭಗವಂತನು ಗಮನಿಸಿದನು. "ಎಲೈ ಕಿರುಬೆರಳೇ, ಏಕೆ ನೀನು ನನ್ನ ಬಳಿಗೆ ಬಂದರೂ ನಿರುತ್ಸಾಹಿಯಾಗಿರುವೆ?" ಎಂದು ಭಗವಂತನು ಕೇಳಿದನು. ಆಗ ಕಿರುಬೆರಳು ತನ್ನ ಪರಿಸ್ಥಿತಿಯನ್ನು ದೇವರಲ್ಲಿ ಈ ರೀತಿ ನಿವೇದಿಸಿಕೊಂಡಿತು : " ಭಗವಂತನೇ, ನನ್ನ ಜೊತೆಗಾರರಾದ ಹೆಬ್ಬೆರಳು, ತೋರುಬೆರಳು, ಮಧ್ಯದ ಉದ್ದನೆಯ ಬೆರಳು ಮತ್ತು ಉಂಗುರದ ಬೆರಳುಗಳು ನನ್ನನ್ನು ಯಾವಾಗಲೂ ಹೀಯಾಳಿಸುತ್ತಿರುತ್ತವೆ. ಹಾಗಾಗಿ ನನ್ನ ಆಕಾರದ ಬಗ್ಗೆ ಜುಗುಪ್ಸೆ ಬಂದಿದೆ." ಇದರ ಪರಿಸ್ಥಿತಿಯನ್ನು ಕಂಡ ಭಗವಂತನು, "ಯೋಚಿಸದಿರು, ನಿನ್ನಲ್ಲಿ ಎಂತಹ ಶಕ್ತಿ ತುಂಬಿದೆ ಎಂದು ನನ್ನ ಮುಂಬರುವ ಅವತಾರದಲ್ಲಿ, ಜಗತ್ತೇ ನಿಬ್ಬೆರಗಾಗಿ ನಿನ್ನನ್ನು ಕೊಂಡಾಡುವಂತೆ ಮಾಡುತ್ತೇನೆ" ಎಂದು ಕಿರುಬೆರಳಿಗೆ ಧೈರ್ಯವನ್ನೂ ಆತ್ಮವಿಶ್ವಾಸವನ್ನೂ ತುಂಬಿ ಕಳುಹಿಸಿದನು. ತಾನು ಕೊಟ್ಟ ಮಾತಿನಂತೆ, ದ್ವಾಪರಯುಗದಲ್ಲಿ ಭಗವಂತನು ಕೃಷ್ಣಾವತಾರವನ್ನು ತಾಳಿದನು; ಇಂದ್ರ ಕಳುಹಿಸಿದ ಮೋಡಗಳು ಪ್ರಳಯಕಾಲದಂತೆ ಮಳೆಯನ್ನು ಸುರಿಸುತ್ತಿರುವಾಗ, ಅದರ ಆರ್ಭಟವನ್ನು ತಡೆಯಲು ಗೋವರ್ಧನ ಬೆಟ್ಟವನ್ನು ತನ್ನ ಕಿರುಬೆರಳಿನಲ್ಲಿ ಎತ್ತಿಹಿಡಿದನು. ಆ ಮೂಲಕ ತಲ್ಲಣಗೊಂಡಿದ್ದ ಜನರಿಗೆಲ್ಲಾ ಶ್ರೀಕೃಷ್ಣನು ಆಶ್ರಯವನ್ನು ನೀಡುತ್ತಾನೆ. ಕಿರುಬೆರಳಿನ ಸಾಹಸವನ್ನು ಅಂದು ಜನತೆ ಕೊಂಡಾಡಿ, ಅದರಲ್ಲಿ ಅಡಗಿರುವ ಅಪಾರ ಶಕ್ತಿಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಈ ಘಟನೆಯಿಂದ ಕಿರುಬೆರಳು ಸಂತೃಪ್ತಿಯನ್ನು ಹೊಂದಿತು.

ಹಾಗೆಯೇ ಒಮ್ಮೆ ಲೋಕಸಂಚಾರವನ್ನು ಪೂರೈಸಿದ ಭಗವಾನ್ ವಿಷ್ಣುವು ತುಂಬಾ ಆಯಾಸಗೊಂಡು, ಪಾದುಕೆಯ ಸಮೇತ ತನ್ನ ವಾಸಸ್ಥಾನವನ್ನು ಪ್ರವೇಶಿಸಿಬಿಟ್ಟನು. ಇದನ್ನು ಗಮನಿಸಿದ ಶಂಖ, ಚಕ್ರ ಮತ್ತು ಕಿರೀಟಗಳು ಪಾದುಕೆಯನ್ನು ದೂಷಿಸಲು ಪ್ರಾರಂಭಿಸಿದವು. ಅದಕ್ಕೆ ಉತ್ತರವಾಗಿ ಪಾದುಕೆಯು, "ಇದರಲ್ಲಿ ನನ್ನದೇನೂ ತಪ್ಪಿಲ್ಲ" ಎಂದು ಹೇಳಿತು. ಇದನ್ನೆಲ್ಲಾ ಗಂಭೀರವಾಗಿ ಗಮನಿಸಿದ ಭಗವಾನ್ ವಿಷ್ಣುವು ಪಾದುಕೆಯನ್ನು ಕುರಿತು, "ನೀನು ಯೋಚಿಸದಿರು. ನಿನ್ನ ಯೋಗ್ಯತೆಯ ಬಗ್ಗೆ ಇವರಿಗೆ ಜ್ಞಾನೋದಯವಾಗುವಂತೆ ಮಾಡುವೆ" ಎಂದು ಭರವಸೆಯನ್ನು ನೀಡಿದನು. ಅದರಂತೆ ತ್ರೇತಾಯುಗದಲ್ಲಿ ಶ್ರೀರಾಮನ ಅವತಾರದ ಸಮಯದಲ್ಲಿ ಶಂಖ, ಚಕ್ರಗಳ ಅವತಾರಿಗಳಾಗಿ ಭರತ ಮತ್ತು ಶತ್ರುಘ್ನರು ಹುಟ್ಟಿದರು. ಭರತನಾದರೋ ಶ್ರೀರಾಮನ ಪಾದುಕೆಗಳನ್ನು ತನ್ನ ತಲೆಯ ಮೇಲೆ ಸಕಲ ಮರ್ಯಾದೆಗಳೊಂದಿಗೆ ಹೊತ್ತುತಂದು, ಸಿಂಹಾಸನದ ಮೇಲೆ ಅವನ್ನು ಇರಿಸಿ ಕೃತಾರ್ಥನಾದನು.

ಇಲ್ಲೊಂದು ಪ್ರಸಂಗ ಸ್ವಾರಸ್ಯವೆನಿಸುತ್ತದೆ. ಕಾಡು ಪ್ರಾಣಿಗಳಾದ ಹುಲಿ, ಸಿಂಹಗಳನ್ನು ಬಲೆಬೀಸಿ ಹಿಡಿಯುವ ನಾವು, ಸೊಳ್ಳೆಗೆ ಹೆದರಿ ಪರದೆಯ ಒಳಗೆ ಅವಿತುಕೊಳ್ಳುತ್ತೇವೆ. ಭಗವಂತನಿಂದ ಸೃಷ್ಟಿಗೊಂಡ ಈ ಜಗತ್ತಿನ ಸೂಕ್ಷ್ಮವೇ ಹಾಗೆ. ಸಕಲ ಜೀವಿಗಳಿಗೂ ತಮ್ಮದೇ ಆದ ಶಕ್ತಿ ಮತ್ತು ಮಹತ್ವ ವಿರುತ್ತದೆ. ಇದನ್ನು ಅರ್ಥ ಮಾಡಿಕೊಳ್ಳಲು ಸ್ವಲ್ಪಮಟ್ಟಿಗೆ ನಮ್ಮ ದೃಷ್ಟಿಕೋನವನ್ನು ಬದಲಿಸಿಕೊಳ್ಳಬೇಕು, ಅಷ್ಟೇ!

(ಆಧಾರ: **Enrich Life Skills through Values** ; ಮೂಲ: ಡಾ. ಎ.ಆರ್.ಸೀತಾರಾಮ್;
ಅನುವಾದ: ಎಸ್. ಶಿವಕುಮಾರ, RIMSE, ಮೈಸೂರು)




**ಮಹಾಮಾತೆ ಶ್ರೀಶಾರದಾದೇವಿಯರು ಶರಣಾಗತರಾದ ದೀನರಿಗೆ ಯಾವತ್ತೂ ಅಪಾರ ಕಾರುಣ್ಯವನ್ನು ತೋರುವ ಕೃಪಾಸಿಂಧು. ಅವರ ಅನುಗ್ರಹದಿಂದ ಒಬ್ಬ ಸಾಧಾರಣ ಮಹಿಳೆಯ ಜೀವನ ಹೇಗೆ ಬದಲಾಯಿತೆಂಬ ವೃತ್ತಾಂತವನ್ನು ಇಲ್ಲಿ ಕಾಣುತ್ತೇವೆ. ತನ್ನ ಸ್ವಂತ ಅನುಭವವನ್ನು, ಝಾರ್‌ಖಂಡ್ ರಾಜ್ಯದ ಗ್ರಾಮೀಣ ಮಹಿಳೆಯೊಬ್ಬಳು ಡಾ. ಅಲ್ಪನಾ ಘೋಷ್ ಎನ್ನುವವರ ಜೊತೆ ಹಂಚಿಕೊಂಡಳು. ಇದು ಲೇಖನರೂಪವಾಗಿ ರಾಮಕೃಷ್ಣ ಮಹಾಸಂಘದ ಇಂಗ್ಲಿಷ್ ಮಾಸಪತ್ರಿಕೆ 'ಪ್ರಬುದ್ಧ ಭಾರತ' ದ ಜುಲೈ, ೨೦೧೨ರ ಸಂಚಿಕೆಯಲ್ಲಿ ಪ್ರಕಟವಾಗಿದೆ. ಈ ಲೇಖನಕ್ಕೆ ಅದೇ ಆಧಾರ. ಇದನ್ನು ಅತ್ಯಂತ ಸುಂದರ ಭಾಷೆಯಲ್ಲಿ ಪೂಜ್ಯ ಸ್ವಾಮಿ ರಾಘವೇಶಾನಂದಜಿಯವರು ಅನುವಾದ ಮಾಡಿ ಕೊಟ್ಟಿದ್ದಾರೆ.**

# ಜ್ಯಾಮಿಟ್ರಿ ಬಾಕ್ಸ್

**ಡಾ. ಅಲ್ಪನಾ ಘೋಷ್**

**ಹಲವರ ಬಾಳು :** ನಮ್ಮ ತಾಯಿ ನನಗೆ 'ಶಾಂತಿ' ಎಂದು ನಾಮಕರಣ ಮಾಡಿದರು. ನಾನು ಗುಡ್ಡಗಾಡಿನ ಒಂದು ಬಡ ಕುಟುಂಬದಲ್ಲಿ ಜನ್ಮ ತಾಳಿದವಳು. ರಾಂಚಿಯ ಹತ್ತಿರದಲ್ಲಿರುವ 'ರಪ್ಪಾ' ಎಂಬುದು ನಮ್ಮ ಹಳ್ಳಿ. ನಮ್ಮ ತಂದೆ ಒಂದು ಚಿಕ್ಕ ಅಂಗಡಿಯಲ್ಲಿ ಕಾರಕೂನರಾಗಿದ್ದರು. ಅವರ ನಾಲ್ಕು ಮಕ್ಕಳಲ್ಲಿ ನಾನೇ ದೊಡ್ಡವಳು. ಪ್ರತಿದಿನ ನಮ್ಮ ತಂದೆ ನನ್ನನ್ನು ತಮ್ಮ ಸೈಕಲ್ಲಿನಲ್ಲಿ ಕರೆದುಕೊಂಡು ಹೋಗಿ ಶಾಲೆಗೆ ಬಿಡುತ್ತಿದ್ದರು. ನಮ್ಮ ಶಾಲೆಯ ಹೆಸರು 'ವಿವೇಕಾನಂದ ಮಾಧ್ಯಮಿಕ ಶಾಲೆ' ಎಂದು. ಅದು ಬಡಮಕ್ಕಳಿಗಾಗಿ ನಡೆಸುತ್ತಿದ್ದ ಉಚಿತ ಶಾಲೆ. ನಾನು ಬಹಳ ಚಿಕ್ಕವಳಾದ್ದರಿಂದ ನನಗೆ ನಮ್ಮ ಮನೆಯ ಆರ್ಥಿಕ ಪರಿಸ್ಥಿತಿ ಅರ್ಥವಾಗುತ್ತಿರಲಿಲ್ಲ. ಪ್ರತಿದಿನ ನಮ್ಮ ತಂದೆಯನ್ನು, "ನನ್ನನ್ನೇಕೆ ಬೇರೆ ಮಕ್ಕಳೆಲ್ಲಾ ಬಸ್ಸಿನಲ್ಲಿ ಹೋಗುತ್ತಿದ್ದ ದೂರದ ದೊಡ್ಡ ಸ್ಕೂಲಿಗೆ ಸೇರಿಸಿಲ್ಲ ?" ಎಂದು ಪ್ರಶ್ನಿಸುತ್ತಿದ್ದೆ. ಅವರೆಲ್ಲಾ ಚೆನ್ನಾಗಿ ಉಡುಪು ಹಾಕಿಕೊಂಡು ಇಂಗ್ಲಿಷ್ ಮಾತನಾಡುತ್ತಾರಲ್ಲ ಎಂದು ಮನಸ್ಸಿನಲ್ಲಿಯೇ ಚಿಂತೆ ಅನುಭವಿಸುತ್ತಿದ್ದೆ.

ಅದಕ್ಕೆ ನಮ್ಮ ತಂದೆ, "ನೋಡಮ್ಮ, ಶಾಲೆ ಚಿಕ್ಕದೋ ದೊಡ್ಡದೋ ಎಂಬುದು ಮುಖ್ಯವಲ್ಲ. ಆದರೆ ಯಾವ ಶಾಲೆಯಲ್ಲಿ ಚಾರಿತ್ರ್ಯ ನಿರ್ಮಾಣ, ಮೌಲ್ಯಾಧಾರಿತ ಶಿಕ್ಷಣ ಕೊಡುವರೋ ಅದು ಮುಖ್ಯ!" ಎನ್ನುತ್ತಿದ್ದರು. ಆಗ ನನಗೆ ಆ ಬಗೆಯ ದೊಡ್ಡ ದೊಡ್ಡ ಶಬ್ದಗಳು ಅರ್ಥವಾಗುತ್ತಿರಲಿಲ್ಲ. ನನಗೆ ಬೇಕಾಗಿದ್ದುದು ದೊಡ್ಡ ಶಾಲೆ, ಬಸ್ಸಿನಲ್ಲಿ ಹೋಗುವುದು ಇತ್ಯಾದಿ. ಆದರೆ ಇಂದು ಅದನ್ನೆಲ್ಲಾ ನೆನಸಿಕೊಂಡಾಗ ನಮ್ಮ ತಂದೆಗೆ ನಾನು, ಪುಟ್ಟದಾದರೂ ಉತ್ತಮವಾದ ಈ ಶಾಲೆಗೆ ಸೇರಿಸಿದುದಕ್ಕಾಗಿ, ಚಿರಋಣಿಯಾಗಿದ್ದೇನೆ.

ವರ್ಷಗಳು ಕಳೆದವು. ನಾನು ಸ್ವಲ್ಪ ದೊಡ್ಡವಳಾದೆ. ಪ್ರೈಮರಿಯಿಂದ ಮಿಡ್ಲ್‌ಸ್ಕೂಲಿಗೆ ಬಂದೆ. ನಾನು ಚೆನ್ನಾಗಿ ಓದುತ್ತಿದ್ದುದರಿಂದ ನನಗೆ ಪೂರ್ಣ ಸ್ಕಾಲರ್‌ಷಿಪ್ ದೊರೆತು, ನನ್ನ ವಿದ್ಯಾಭ್ಯಾಸ ಸರಾಗವಾಗಿ ನಡೆಯುತ್ತಿತ್ತು. ಸ್ವಲ್ಪ ವರ್ಷಗಳು ಚೆನ್ನಾಗಿ ನಡೆದವು. ಅನಂತರ ವಿಧಿ ನನ್ನ ಜೀವನದಲ್ಲಿ ಆಟವಾಡಿತು. ಒಂದು ದಿನ ಹಠಾತ್ತನೆ ನಮ್ಮ ತಂದೆ ಹೃದಯಾಘಾತದಿಂದ ತೀರಿಹೋದರು. ಆಕಾಶವೇ ತಲೆಯ ಮೇಲೆ ಬಿದ್ದಂತಾಯಿತು. ಅವರೊಬ್ಬರ ಸಂಪಾದನೆಯ ಮೇಲೆಯೇ ನಮ್ಮ ಸಂಸಾರ ನಡೆಯುತ್ತಿತ್ತು. ನಮ್ಮ ತಾಯಿ, ನಾವು ನಾಲ್ಕು ಮಕ್ಕಳು ಅನಾಥರಾದೆವು. ನಮ್ಮ ತಾಯಿ ಧೈರ್ಯವಂತೆ. ನಾನು ಆಗ ಹತ್ತನೆಯ ತರಗತಿಯಲ್ಲಿದ್ದೆ. "ನಾನು ಮನೆಗೆಲಸ ಮಾಡಿ ನಿಮ್ಮನ್ನು ನೋಡಿಕೊಳ್ಳುತ್ತೇನೆ. ಹೇಗಾದರೂ ಇದೊಂದು ವರ್ಷ ಓದಿಬಿಡು" ಎಂದರು. ವಿವೇಕಾನಂದ ಶಾಲೆಯವರೂ ಅದನ್ನೇ ಅನುಮೋದಿಸಿ ಸಾಧ್ಯವಾದಷ್ಟು ಸಹಾಯ ಮಾಡಿದರು. ನಾನೂ ಧೈರ್ಯಮಾಡಿ, ದುಃಖವನ್ನೆಲ್ಲಾ ನುಂಗಿಕೊಂಡು ಮನೆಗೆಲಸದಲ್ಲಿ ತಾಯಿಗೆ ಸಹಾಯ ಮಾಡುತ್ತಾ, ಹತ್ತನೆಯ ತರಗತಿಯಲ್ಲಿ ತೇರ್ಗಡೆಯಾದೆ. ಮುಂದೆ ಓದುವುದು ದೂರದ ಮಾತಾಗಿತ್ತು. ನಮ್ಮ ತಂದೆಯ ಸ್ನೇಹಿತರೊಬ್ಬರು, ತಮ್ಮ ಕಚೇರಿಯಲ್ಲಿ ಲೆಕ್ಕ ಬರೆಯುವ ಕೆಲಸ ಕೊಟ್ಟರು. ಅದು ಪುಟ್ಟ ಹಳ್ಳಿಯಾದುದರಿಂದ ವೇತನ ತುಂಬಾ ಕಡಿಮೆ. ಆದರೆ ಅದೇ ನಮಗೆ ದೊಡ್ಡ ನಿಧಿಯಾಗಿತ್ತು. ಹತ್ತನೆಯ ತರಗತಿಯಲ್ಲಿ ಉತ್ತಮ ರೀತಿಯಲ್ಲಿ ತೇರ್ಗಡೆಯಾಗಿದ್ದುದರಿಂದ ನನಗೆ ವಿವೇಕಾನಂದ ಮಿಡ್ಲ್ ಸ್ಕೂಲಿನಲ್ಲಿ ಒಂದು 'ಜ್ಯಾಮಿಟ್ರಿ ಬಾಕ್ಸ್' ಅನ್ನು ಬಹುಮಾನವಾಗಿ ಕೊಟ್ಟಿದ್ದರು. ಅದರಲ್ಲಿದ್ದ ಆಕರ್ಷಣೆಯೆಂದರೆ ಅದರ ಒಳಗಡೆ ಅಂಟಿಸಿದ್ದ ಶ್ರೀಶಾರದಾದೇವಿಯವರ ಒಂದು ಸುಂದರ ಭಾವಚಿತ್ರ. ಅದನ್ನು ನಾನು ಜಾಗರೂಕತೆಯಿಂದ ನನ್ನ ಉಳಿದ ಪುಸ್ತಕಗಳ ಜೊತೆ ಕಪಾಟಿನಲ್ಲಿಟ್ಟಿದ್ದೆ. ನನಗೆ ಮುಂದೆ ಓದುವ ಆಸೆಯಿದ್ದರೂ, ನಮ್ಮ ದುರ್ದೆಶೆಯಿಂದ ಬರೀ ಕಪಾಟಿನತ್ತ ನೋಡುವುದರಲ್ಲೇ ತೃಪ್ತಿಪಟ್ಟುಕೊಳ್ಳುತ್ತಿದ್ದೆ. ಪಾಪ ! ನಮ್ಮಂಥವರು ಎಷ್ಟು ಮಂದಿಯೋ ಈ ದೇಶದಲ್ಲಿ! ನನಗೆ ಜ್ಯಾಮಿಟ್ರಿ ಹಾಗೂ ಗಣಿತಶಾಸ್ತ್ರದಲ್ಲಿ ಅಪಾರ ಆಸಕ್ತಿ. ಆದರೆ ಈಗ ನನ್ನ ಜ್ಯಾಮಿಟ್ರಿ ಬಾಕ್ಸ್ ನೋಡುವುದರಿಂದಲೇ ತೃಪ್ತಿಪಟ್ಟುಕೊಳ್ಳುತ್ತಿದ್ದೆ.

ಮುಂದಿನ ವರ್ಷ ನಮ್ಮ ತಾಯಿ ನನಗೆ ಗಂಡು ಹುಡುಕಲು ಆರಂಭಿಸಿದರು. ನನಗೆ ಅದರಲ್ಲಿ ಸ್ವಲ್ಪವೂ ಇಷ್ಟವಿರಲಿಲ್ಲ. ಹೇಗಾದರೂ ಮುಂದೆ ಓದಬೇಕೆಂಬ ಆಸೆ. ಆದರೆ ನನ್ನ ತಾಯಿ, ಮದುವೆಯಾಗಿ ಬದುಕಿನಲ್ಲಿ ನೆಲೆಯೂರಬೇಕೆಂದು ಆಗ್ರಹಪಡಿಸಿದರು. ಅದಕ್ಕೆ ಜ್ಯಾಮಿಟ್ರಿ ಬಾಕ್ಸ್ ಅಪ್ಪಿಕೊಂಡು ಮೌನವಾಗಿ ಅಳುವುದೊಂದೇ ನನ್ನ ಪ್ರತಿಕ್ರಿಯೆಯಾಗಿತ್ತು.

ಹೀಗೆ ಕೆಲವು ವರ್ಷಗಳು ಕಳೆದು ನಾನು ೨೦ ವರ್ಷ ವಯಸ್ಸಿನವಳಾಗಿದ್ದಾಗ, ಅನಿಲ್ ಎಂಬ ಹುಡುಗನೊಡನೆ ಮದುವೆ ಮಾಡಿದರು. ಅವನು ಒಂದು ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ. ಸಾಕಷ್ಟು ಸಂಬಳವೂ ಬರುತ್ತಿತ್ತು. ನಾವು ಸಂಸಾರವನ್ನು ಮತ್ತೊಂದು ಬಾಡಿಗೆಮನೆಯಲ್ಲಿ ಶುರು ಮಾಡಿದೆವು. ಒಂದು ವರ್ಷದ ನಂತರ ಒಂದು ಗಂಡುಮಗುವಿಗೆ ಜನ್ಮವಿತ್ತೆ. 'ಅಜಯ್' ಎಂದು ನಾಮಕರಣ ಮಾಡಿದೆವು. ನನ್ನ ಕೆಲಸವನ್ನು ಬಿಟ್ಟುಬಿಟ್ಟೆ. ನಮ್ಮ ಸಂಸಾರವೇನೋ ಚೆನ್ನಾಗಿಯೇ ನಡೆಯುತ್ತಿತ್ತು. ಆದರೂ ಮನಸ್ಸಿನಲ್ಲೇ ನಾನು ಹೆಚ್ಚು ಹೆಚ್ಚು ಓದಲಿಲ್ಲವಲ್ಲ ಎಂದು ಒಮ್ಮೊಮ್ಮೆ ಕೊರಗುತ್ತಿದ್ದೆ. ನಮ್ಮ ಮನೆಯಿಂದ ಬಳುವಳಿಯಾಗಿ ತಂದಿದ್ದ ನನ್ನ ಶಾಲೆಯ ಪುಸ್ತಕಗಳು ಹಾಗೂ ಜ್ಯಾಮಿಟ್ರಿ ಬಾಕ್ಸ್ ಅನ್ನು ನೋಡುತ್ತಾ ಸಮಾಧಾನಪಟ್ಟುಕೊಳ್ಳುತ್ತಿದ್ದೆ. ಅದು ಬಿಟ್ಟರೆ ಜೀವನ ಸಂತೋಷಮಯವಾಗೇ ಇತ್ತು. ಯಾವುದಕ್ಕೂ ಕೊರತೆಯಿರಲಿಲ್ಲ.

ಹೀಗೆಯೇ ಆರು ತಿಂಗಳು ಕಳೆದವು. ದುರ್ವಿಧಿ ಮತ್ತೆ ಆವರಿಸಿತು. ಒಂದು ರಾತ್ರಿ ಅನಿಲ್ ತುಂಬಾ ಕುಡಿದು ಅರ್ಧರಾತ್ರಿಯ ಸಮಯಕ್ಕೆ ಬಂದರು. ನಾನು ಅವರನ್ನು, "ಏಕೆ ಕುಡಿಯಲು ಆರಂಭಿಸಿದಿರಿ?" ಎಂದು ಪ್ರಶ್ನಿಸಿದೆ. ಅವರು ಬಹಳ ಒರಟಾಗಿ, "ಅದು ನನ್ನ ವೈಯಕ್ತಿಕ ವಿಷಯ. ಅದರಲ್ಲಿ ತಲೆಹಾಕಬೇಡ" ಎಂದರು. ನನಗೆ ದುಃಖ ಹಾಗೂ ನೋವುಂಟಾಯಿತು. ಅವರು ಎಂದೂ ನನ್ನೊಡನೆ ಅಷ್ಟು ಕ್ರೂರವಾಗಿ ವರ್ತಿಸಿರಲಿಲ್ಲ. ನನಗೆ ರಾತ್ರಿಯೆಲ್ಲಾ ನಿದ್ರೆ ಬರಲಿಲ್ಲ. ಅಳುತ್ತಾ ಮಲಗಿದ್ದೆ. ಆದರೆ ಅವರು ಸುಖವಾಗಿ ನಿದ್ರಿಸುತ್ತಿದ್ದರು. ಮಾರನೇ ದಿನ ಬೆಳಗ್ಗೆ ಮಾಮೂಲಿನಂತಿದ್ದರು. ನಾನು ಆ ವಿಷಯವನ್ನು ಎತ್ತಿ ಮತ್ತೆ ಅವರ ತಲೆಕೆಡಿಸುವುದು ಬೇಡ ಎಂದು ಸುಮ್ಮನಾದೆ. ಆದರೆ ಅಂದು ರಾತ್ರಿ ಕೂಡ ಕಚೇರಿಯಿಂದ ಬಹಳ ಹೊತ್ತಾದ ಮೇಲೆ ಬಂದರು. ಮತ್ತೆ ಅದೇ ಅವಸ್ಥೆಯಲ್ಲಿ, ಅಂದರೆ ಕುಡಿದ ಸ್ಥಿತಿಯಲ್ಲಿ, ಇದ್ದರು. ಇದು ದಿನನಿತ್ಯದ ಪದ್ಧತಿಯಾಯಿತು. ನಾನು ಧೈರ್ಯಮಾಡಿ ಒಂದೆರಡು ಸಾರಿ ಈ ವಿಷಯ ಎತ್ತಿ, ವಿರೋಧಿಸಲು ಯತ್ನಿಸಿದೆ. ಇದರ ಫಲ ಬೈಗಳು. ಇದಲ್ಲದೆ ಒಂದೆರಡು ಬಾರಿ ಹೊಡೆದೂ ಹೊಡೆದರು. ನಮ್ಮಿಬ್ಬರ ಮಧ್ಯೆ ಮಾತುಕತೆ ನಿಂತು ಹೋಯಿತು. ದುಡಿಯುವ ಹಣವನ್ನೆಲ್ಲಾ ಕುಡಿತಕ್ಕೆ ಸುರಿಯುತ್ತಿದ್ದರಿಂದ ಮನೆಗೆ ಹಣ ಕೊಡುವುದೂ ಕಡಮೆಯಾಗುತ್ತಾ ಬಂದಿತು. ನಾನು ಮೌನವಾಗಿ ದುಃಖದಿಂದ ಮನೆಕೆಲಸದತ್ತ ಗಮನ ಕೊಡುತ್ತಿದ್ದೆ. ನನ್ನ ಮಗ ಅಜಯ್ ಒಬ್ಬನೇ, ನಾನು ಆತ್ಮಹತ್ಯೆ ಮಾಡಿಕೊಳ್ಳಲು ಅಡ್ಡವಾಗಿ ನಿಂತಿದ್ದ. ಎಷ್ಟು ಬೇಗ ಈ ಸ್ವರ್ಗದ ಮನೆ ನರಕವಾಯಿತು ಎಂದು ನನಗೆ ಅತಿ ದುಃಖವಾಯಿತು.

**ಒಂದು ಬೆಳಕಿನ ಕಿರಣ:** ಏನು ಮಾಡುವುದು? ಪರಿಹಾರವನ್ನು ಎಲ್ಲಿ ಹುಡುಕುವುದು? ನನ್ನ ದುರದೃಷ್ಟವನ್ನು ನಾನೇ ಶಪಿಸುತ್ತಿದ್ದೆ. ಇದನ್ನು ನಮ್ಮ ತಾಯಿಗಾಗಲೀ, ಅತ್ತೆ ಮಾವಂದಿರಿಗಾಗಲೀ ತಿಳಿಸಿ ಅವರನ್ನು ದುಃಖಕ್ಕೀಡುಮಾಡಲು ಇಷ್ಟವಾಗಲಿಲ್ಲ. ಪಾಪ, ಅವರು ತಾನೇ ಏನು ಮಾಡಿಯಾರು? ದಿನ ಕಳೆದಂತೆ ನನ್ನ ಪತಿಯ ಕುಡಿತ ಹೆಚ್ಚಾಗುತ್ತಾ ಬಂದಿತು, ಕೆಲಸಕ್ಕೂ ಸರಿಯಾಗಿ ಹೋಗುತ್ತಿರಲಿಲ್ಲ. ಅವರಿಗೆ ಪೂರ್ಣ ಸಂಬಳ ಬರದೇ ಇದ್ದುದರಿಂದಲೂ, ಸರಿಯಾಗಿ ಹಣ ಕೊಡದೇ ಇದ್ದುದರಿಂದಲೂ ಸಂಸಾರ ನಡೆಸುವುದೇ ಕಷ್ಟವಾಗುತ್ತಿತ್ತು.

ಒಂದು ದಿನ ಮನೆಗೆಲಸವೆಲ್ಲಾ ಮುಗಿಸಿ ದುಃಖದಿಂದ ನನ್ನ ಮೇಜಿನ ಮುಂದೆ ಕುಳಿತಿದ್ದೆ. ಸುಂದರವಾಗಿ ರೂಪುಗೊಳ್ಳುತ್ತಿದ್ದ ಸಂಸಾರ ಈ ಒಂದು ಕೆಟ್ಟ ಚಟದಿಂದ ಹೇಗೆ ಕೆಡುತ್ತದೆಯೆಂಬುದನ್ನು ಯೋಚಿಸುತ್ತಿದ್ದೆ. ಅಳುವುದನ್ನು ಬಿಟ್ಟು ಬೇರೇನೂ ದಾರಿ ತೋರುತ್ತಿರಲಿಲ್ಲ. ಕಪಾಟಿನಲ್ಲಿದ್ದ ಜ್ಯಾಮಿಟ್ರಿ ಬಾಕ್ಸ್ ಮೇಲೆ ಕಣ್ಣು ಸಾಗಿತು. ಅದನ್ನು ಕೈಗೆತ್ತಿಕೊಂಡು ತೆರೆದೆ. ಅದರಲ್ಲಿದ್ದ ಕಂಪಾಸ್, ಸ್ಕೇಲ್, ಪೆನ್ಸಿಲ್, ಆಂಗಲ್ಸ್ ಇವೆಲ್ಲವನ್ನೂ ಮುಟ್ಟಿ ಮುಟ್ಟಿ ನೋಡಿದೆ. ಶಾಲೆಯ ದಿನಗಳು, ಉತ್ಸಾಹದಿಂದ ಓದುತ್ತಿದ್ದ ಬಗೆ ಎಲ್ಲಾ ನೆನಪಿಗೆ ಬಂದಿತು. ಕಣ್ಣುಗಳು ಅದರಲ್ಲಿ ಅಂಟಿಸಿದ್ದ ಶ್ರೀ ಶಾರದಾದೇವಿಯವರ ಭಾವಚಿತ್ರದ ಮೇಲೆ ಹಾಯ್ದವು. ಸ್ವಲ್ಪ ಹೊತ್ತು ಹಾಗೆಯೇ ನೋಡುತ್ತಿದ್ದೆ. ನಮ್ಮ ಉಪಾಧ್ಯಾಯಿನಿ ಹೇಳಿದ್ದ ಮಾತು ನೆನಪಿಗೆ ಬಂದಿತು: "ಶ್ರೀಮಾತೆ ಶಾರದಾದೇವಿ ಸಾಮಾನ್ಯ ಸ್ತ್ರೀಯಲ್ಲ. ಅವರು ಎಲ್ಲರ ನಿಜವಾದ ತಾಯಿ, ಎಲ್ಲರನ್ನೂ ಕಾಪಾಡುವವರು. ಅವರಿಗೆ ಶ್ರೀಮಂತರು, ಬಡವರು, ಎಲ್ಲರೂ ಸಮಾನರೇ. ಅವರು ಪ್ರತಿಯೊಬ್ಬರ ಪ್ರಾರ್ಥನೆಯನ್ನೂ ಆಲಿಸುತ್ತಾರೆ." ಇದ್ದಕ್ಕಿದ್ದ ಹಾಗೇ ನನ್ನ ಅಂತರಾಳದಲ್ಲಿ ಏನೋ ಬೆಳಕನ್ನು ಕಂಡಂತಾಯಿತು. ಶ್ರೀಮಾತೆ ನನಗೂ ಖಂಡಿತವಾಗಿ ಸಹಾಯ ಮಾಡುವವರು ಎನಿಸಿತು. ಅಂದಿನಿಂದ ಪ್ರತಿದಿನ ಬೆಳಿಗ್ಗೆ, ಸಂಜೆ ಅವರ ಭಾವಚಿತ್ರದ ಮುಂದೆ ಕುಳಿತು ಬಹಳ ಹೊತ್ತು ಪ್ರಾರ್ಥಿಸಲಾರಂಭಿಸಿದೆ. ಆದರೂ ಅನಿಲ್‌ರಲ್ಲಿ ಯಾವ ಬದಲಾವಣೆಯನ್ನೂ ಕಾಣಲಿಲ್ಲ. ನಾನೂ ಧೃತಿಗೆಡಲಿಲ್ಲ. ಎಲ್ಲ ಸಮಸ್ಯೆಗಳನ್ನೂ ಎದುರಿಸುವ ಧೈರ್ಯ ಕೊಡೆಂದು ಶ್ರೀಮಾತೆಯವರಲ್ಲಿ ಪ್ರಾರ್ಥಿಸುತ್ತಿದ್ದೆ.

ನಮ್ಮ ಕುಟುಂಬದ ಆರ್ಥಿಕ ಸ್ಥಿತಿ ದಿನೇ ದಿನೇ ಕೆಡುತ್ತಿತ್ತು. ನಾನು ಯಾವುದಾದರೂ ಕೆಲಸ ಹುಡುಕಲು ತೀರ್ಮಾನಿಸಿದೆ. ನಾನು ಓದಿದ್ದ ವಿವೇಕಾನಂದ ಸ್ಕೂಲಿನಲ್ಲೇ ಏಕೆ ಯಾವುದಾದರೂ ಕೆಲಸ ಕೇಳಬಾರದು ಎನಿಸಿತು. ಕಸ ಗುಡಿಸುವ ಕೆಲಸವಾದರೂ ಕೊಟ್ಟೇ ಕೊಡುವರು ಎನಿಸಿತು. ನನ್ನ ಮಗನನ್ನು ಹೆಗಲಿನಲ್ಲಿ ಎತ್ತಿಕೊಂಡು ಹೊರಟೆ. ಶಾಲೆಯ ಮುಖ್ಯೋಪಾಧ್ಯಾಯಿನಿ ನನ್ನನ್ನು ಗುರುತಿಸಿದರು. "ಏನು, ಇಷ್ಟು ಬಡವಾಗಿ ಬಿಟ್ಟಿದ್ದೀಯಲ್ಲಾ?" ಎಂದರು. ಅವರು ನನ್ನ ಮದುವೆಗೂ ಬಂದಿದ್ದರು. ನಾನು ದುಃಖ ತಡೆದುಕೊಳ್ಳಲಾರದೆ ನನ್ನ ಕಥೆಯನ್ನೆಲ್ಲಾ ಹೇಳಿಕೊಂಡೆ. ಅವರ ಕಣ್ಣೂ ನೀರಿನಿಂದ ತುಂಬಿತ್ತು. "ಕಷ್ಟ ಯಾರಿಗೂ ತಪ್ಪಿದ್ದಲ್ಲ. ಧೃತಿಗೆಡಬೇಡ, ಶ್ರೀಮಾತೆ ಶಾರದಾದೇವಿ ನಿನ್ನಂಥ ಒಳ್ಳೆಯವರ ಕೈಬಿಡುವುದಿಲ್ಲ" ಎಂದು ಸಮಾಧಾನ ಮಾಡಿದರು. ನನಗೆ ಬೇಕಾಗಿದ್ದದ್ದು ಬರಿಯ ಆಶ್ವಾಸನೆಯ ಮಾತಲ್ಲ. ನಾನು ಕಸ ಗುಡಿಸುವ ಕೆಲಸ ಕೇಳಿದೆ. ಅವರಿಗೆ ಆಘಾತವಾಯಿತು. "ನೀನು ಓದಿದ ಹುಡುಗಿ, ಲೆಕ್ಕ ಬರೆಯುವ ಕೆಲಸ ಮಾಡಿದ್ದ ಹುಡುಗಿ ನೀನು. ಈಗ ಕಸ ಗುಡಿಸುವೆಯಾ?" ಎಂದು ಕನಿಕರದಿಂದ ನೋಡಿದರು. ಅನಂತರ ದೃಢನಿರ್ಧಾರದಿಂದ ಹೇಳಿದರು, "ನೋಡಮ್ಮಾ, ನಿನಗೇ ತಿಳಿದಿರುವಂತೆ ಇದು ಉಚಿತ ಶಾಲೆ, ಇಲ್ಲಿ ಈಗ ಸದ್ಯಕ್ಕೆ ಯಾವ ಹುದ್ದೆಯೂ ಖಾಲಿ ಇಲ್ಲ. ಖಂಡಿತವಾಗಿ ನಾನು ಇದನ್ನು ಮನಸ್ಸಿನಲ್ಲಿಟ್ಟುಕೊಂಡು ಸಮಯ ಬಂದಾಗ ನಿನಗೆ ಸಹಾಯ ಮಾಡುತ್ತೇನೆ. ಅಲ್ಲಿಯವರೆಗೆ ಕಾದಿರು" ಎಂದು ಉತ್ಸಾಹ ತುಂಬಿದರು. ಸದ್ಯದ ಸಮಸ್ಯೆ ಪರಿಹಾರವಾಗಲಿಲ್ಲ ಎಂಬ ದುಃಖದಿಂದಲೇ ಹೊರಟೆ. ಹೊರಡುವಾಗ, "ನೋಡು, ನಮ್ಮ ಶಾಲೆಯಲ್ಲಿ